


# ಕಾರಿಗೂ ಕೇಶವಿನ್ಯಾಸ

ಕೆಲವರು ತಮ್ಮ ಕಾರುಗಳಿಗೆ ಚಿತ್ರ ವಿಚಿತ್ರ ರೀತಿಯಲ್ಲಿ ಅಂದರೆ ಹಲ್ಲುಗಳನ್ನು ಅಂಟಿಸಿಯೋ ಅಥವಾ ಸ್ವರೋಸ್ಕಿ ಮಣಿಗಳನ್ನು ಅಂಟಿಸಿಯೋ ಹೊದಿಕೆ ಮಾಡಿರುವುದನ್ನು ನೋಡಿಯೇ ನಾವು ಅಚ್ಚರಿಗೊಳ್ಳುತ್ತೇವೆ. ಆದರೆ ಇದೆಲ್ಲವನ್ನೂ ಮೀರಿಸಿ ಇಟಲಿಯ ಮಹಿಳೆಯೊಬ್ಬಳು ಮಾನವ ತಲೆಗೂದಲಿನಿಂದ ತನ್ನ ಕಾರನ್ನು ಕವರ್ ಮಾಡಿದ್ದಾಳೆ. ಕೇಶವಿನ್ಯಾಸಕಿಯಾಗಿರುವ ಈಕೆ ತನ್ನ ವೃತ್ತಿಗೆ ಗೌರವ ಸಲ್ಲಿಸುವ ಕಾರಣಕ್ಕಾಗಿ ಈ ರೀತಿ ಮಾಡಿದ್ದಾಳಂತೆ. ಮರಿಯಾ ಲುಸಿಯಾ ಮುಗ್ನೊ ಎಂಬ 44 ವರ್ಷ ವಯಸ್ಸಿನ ಈ ಮಹಿಳೆಯ ಕಾರಿನ ಹೊರಭಾಗ, ಡ್ಯಾಷ್ ಬೋರ್ಡ್, ಸ್ಟೀರಿಂಗ್ ವೀಲ್ ಎಲ್ಲವೂ ಸಹ ಕೂದಲುಮಯ.

ಗೆಳತಿಯೊಬ್ಬಳು, 'ಈ ಕೆಲಸ ನಿನ್ನಿಂದಾಗದು' ಎಂದು ಹೇಳಿದಾಗ, ಮರಿಯಾ ಹಠ ತೊಟ್ಟು ತನ್ನ ಕಾರನ್ನು ತಲೆಕೂದಲಿನಿಂದಲೇ ಪೂರ್ತಿ ಕವರ್ ಮಾಡುತ್ತೇನೆಂದು 2010 ರಲ್ಲಿ ತೀರ್ಮಾನಿಸಿದಳಂತೆ. ಇದಕ್ಕೆ ಬೇಕಾಗುವ ಕೂದಲನ್ನು ಭಾರತದಿಂದ ಆಮದು ಮಾಡಿಕೊಂಡು, 150 ತಾಸುಗಳನ್ನು ವ್ಯಯಿಸಿ, ತನ್ನ ಸಹಾಯಕಿ ವ್ಯಾಲೆನ್ಟಿನೋ ಸ್ಟ್ಯಾಸ್ಸಾನೊಳ ಸಹಾಯದಿಂದ ದಪ್ಪ ದಪ್ಪ ಜಡೆಗಳನ್ನಾಗಿ ಹೆಣೆದುಕೊಂಡು ತನ್ನ ಫಿಯೆಟ್ 500 ಕಾರಿಗೆ ಹೊದಿಕೆ ಮಾಡಿದ್ದಾಳೆ.

ಇಷ್ಟು ಶ್ರಮಪಟ್ಟಿದ್ದರಿಂದಲೇ ಮರಿಯಾಳ ಕಾರು ಇಡೀ ಪ್ರಪಂಚದಲ್ಲೇ ಕೂದಲುಳ್ಳ ಕಾರು ಎಂಬ ಗಿನ್ನೆಸ್ ವಿಶ್ವ ದಾಖಲೆಯ ಮನ್ನಣೆ ಗಳಿಸಿಕೊಂಡಿದೆ. ತಲೆಕೂದಲಿನಿಂದ ಶೃಂಗಾರಗೊಂಡ ಕಾರನ್ನು ಗ್ಯಾರೇಜ್‌ನಲ್ಲಿ ಸುಮ್ಮನೆ ಶೋಕಿಗಾಗಿ ಇರಿಸಿದ್ದಾಳೆಂದುಕೊಳ್ಳಬೇಡಿ. ಇದನ್ನು ಸ್ವತಃ ಮರಿಯಾಳೇ ಡ್ರೈವ್ ಮಾಡುತ್ತಾ ಊರೆಲ್ಲಾ ಸುತ್ತುತ್ತಾಳಂತೆ. ಹಾಗೆಯೇ ನಿಯಮಿತವಾಗಿ ಬ್ರಶ್ ಮಾಡುತ್ತಾ ಕೂದಲನ್ನು ನೀಟಾಗಿ ಇರಿಸುತ್ತಾಳಂತೆ. ಸಹಜ ತಲೆಕೂದಲಿನ ಚೌರಿಗಳಿಗೆ ಅಧಿಕ ಬೆಲೆಯಿರುವ ಕಾರಣ ಮರಿಯಾಳ ಕಾರಿನ ಮೌಲ್ಯ ಸುಮಾರು 61,46,000 ರೂಪಾಯಿಗಳು ಎಂದು ಅಂದಾಜಿಸಲಾಗಿದೆ.

■ ವಿದ್ಯಾ ವಿ. ಹಾಲಭಾವಿ




